ಶ್ರೀ ಬಿ. ಸಿ. ನಂಜುಂಡಯ್ಯ,—ಆ ಪ್ರಪೋಸಲ್ಲನ್ನು ದಯವಿಟ್ಟು ಸ್ಯಾಂಕ್ಷನ್ ಮಾಡುತ್ತೀರಾ ?

ಶ್ರೀ. ಟಿ. ಚನ್ನಯ್ಯ.—ಪ್ರಪೋಸಲ್ ಬಂದಿದೆ. ವಿಮರ್ಶೆ ಮಾಡಿ ನೋಡುತ್ತೇವೆ.

Sravanabelagola-Hirisave Road (Construction of culverts and causeways)

Q.—845. Sri K. LAKKAPPA (Channarayapatna).—

Will the Government be pleased to state:—

(*a*) whether they are aware that the earth work of a road from Sravanabelagola to Hirisave has been done by Scouts and villagers ;

(*b*) the steps that have been taken to put up culverts and causeways on this road—and also to metalling the same ?

A.—Sri T. CHANNIAH (Minister for Public Health and Local Self-Government).—

(*a*) Yes.

(*b*) The completion of this road with necessary culverts and causeways at an estimated cost of Rs. 20,000 is proposed to be taken up under the Local Development Works Scheme during the current year (*i. e.*, 1955-56),

ಶ್ರೀ ಕೆ. ಲಕ್ಕಪ್ಪ.—ಈ ರಸ್ತೆಗಾಗಿ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನವರು ಕಲ್ವರ್ಟ್ಸ್ ಮತ್ತು ಕಾಸ್ವೇಸ್‌ಗಳಿಗಾಗಿ 80,000 ರೂಪಾಯಿಗಳ ಎಸ್ಟಿಮೇಟನ್ನೂ, ಮೆಟಲ್ ಮಾಡುವುದಕ್ಕೆ 60,000 ರೂಪಾಯಿಗಳ ಎಸ್ಟಿಮೇಟನ್ನೂ, ಒಟ್ಟು 1,40,000 ರೂಪಾಯಿಗಳ ಎಸ್ಟಿಮೇಟ್ ತಯಾರು ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ.—ಒಂದು ಲಕ್ಷ ರೂಪಾಯಿನ ಒಂದು ಎಸ್ಟಿಮೇಟನ್ನು ಹಿಂದೆ ತಯಾರು ಮಾಡಿ ಅದಕ್ಕೆ ಹೆಚ್ಚು ಹಣ ಒದಗಿಸಬೇಕಾದ ಸಂದರ್ಭ ಬಂದಿದೆಯೆಂದು ಹೇಳಿ, ಅಷ್ಟು ಬೇಕಾಗಿಲ್ಲವೆಂದು, 20,000 ರೂಪಾಯಿಗಳ ಒಂದು ಅಂದಾಜು ತಯಾರುಮಾಡಿ ಕಲ್ವರ್ಟ್ ಮತ್ತು ಕಾಸ್ವೆ ಈ ಎರಡಕ್ಕೆ ಸಂಬಂಧಪಟ್ಟಂತೆ ಮಾತ್ರ ಕಳುಹಿಸಬೇಕೆಂದು ಸಂಬಂಧಪಟ್ಟ ಇಲಾಖಾಧಿಕಾರಿಗಳಿಂದ ಒಂದು proposalನ್ನು call for ಮಾಡಿದ್ದೇವೆ.

ಶ್ರೀ ಕೆ. ಲಕ್ಕಪ್ಪ.—ಬರೀ ಪ್ರಪೋಸಲ್ಸ್ ಮಾತ್ರವೋ ಅಥವಾ 20,000 ರೂಪಾಯಿಗೆ ಎಸ್ಟಿಮೇಟ್ ಏನಾದರೂ ತಯಾರಾಗಿದೆಯೂ ?

ಶ್ರೀ ಟಿ. ಚನ್ನಯ್ಯ.—20,000 ರೂಪಾಯಿಗಳಿಗೊಂದು ಎಸ್ಟಿಮೇಟ್ ಕಳುಹಿಸಿ ಕೊಡುತ್ತಾರೆಂದು ವರದಿ ಬಂದಿದೆ. ಇನ್ನೂ ಬಂದಿಲ್ಲ.

ಶ್ರೀ ಕೆ. ಲಕ್ಕಪ್ಪ.—ಎಸ್ಟಿಮೇಟ್ ತಯಾರಾದ ಕೂಡಲೆ ಸ್ಯಾಂಕ್ಷನ್ ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಅದನ್ನು local development works ನಲ್ಲಿ ಸೇರಿಸಿ ಆ ಕೆಲಸವನ್ನು ಪೂರ್ತಿಸಬೇಕೆಂದು ಮಾಡಿದ್ದೇವೆ, ಮಾಡುತ್ತೇವೆ.

Labour Colony at Srirampur.

Q.—880. Sri V. R. NAIDU (Malleswaram).—

Will the Government be pleased to state :—

(*a*) from how many years people are living in the Labour Colony at Srirampur ;

(*b*) whether they are aware that the residents of this colony are very poor ;

(*c*) whether the land on which this colony is built belongs to the Corporation or the Government ;

(*d*) whether it has come to their notice that these people are undergoing hardship for want of drinking water, roads, light and sanitary facilities ;

(*e*) whether they have contemplated to give these sites to the people living thereon free of charges ?

A.— Sri T. CHANNIAH (Minister for Public Health and Local Self-Government).—

(*a*) About 20 years.

(*b*) Yes.

(*c*) Belongs to the Corporation.

(*d*) Roads, street lights and public taps and public latrines are provided.

(*e*) No.

ಶ್ರೀ ವಿ. ಆರ್. ನಾಯ್ಡು.—ಶ್ರೀರಾಮಪುರದ ಲೇಬರ್ ಕಾಲೊನಿಯಲ್ಲಿ ಜನರು ಎಷ್ಟು ವರ್ಷಗಳಿಂದ ವಾಸ ಮಾಡುತ್ತಿದ್ದಾರೆ ?

ಶ್ರೀ ಟಿ. ಚನ್ನಯ್ಯ.—20 ವರ್ಷಗಳಿಂದ ಎಂದು ಹೇಳಿದೆ.

ಶ್ರೀ ವಿ. ಆರ್ ನಾಯ್ಡು.— ಒಂದೊಂದು ಮನೆಗೆ ಎಷ್ಟು ಖರ್ಚಾಗಿದೆಯೆಂದು ಸರ್ಕಾರದವರು ತಿಳಿದು ಕೊಂಡಿದ್ದಾರೆಯೇ ?

ಶ್ರೀ ಟಿ. ಚನ್ನಯ್ಯ.—ತಿಳಿದು ಕೊಂಡಿದ್ದಾರೆ.

ಶ್ರೀ ವಿ. ಆರ್. ನಾಯ್ಡು.—ಶ್ರೀರಾಮಪುರದ ಲೇಬರ್ ಕಾಲೊನಿಯಲ್ಲಿರುವ ಮನೆಗಳನ್ನು ಕಟ್ಟುವುದಕ್ಕೆ ಬಂಡವಾಳ ಎಷ್ಟು ಬಿದ್ದಿದೆಯೆಂಬುದನ್ನು ಹೇಳುತ್ತೀರಾ ?

ಶ್ರೀ ಟಿ. ಚನ್ನಯ್ಯ.—ತಿಳಿದು ಹೇಳುತ್ತೇನೆ.

ಶ್ರೀ ವಿ. ಆರ್. ನಾಯ್ಡು.—ಈ ಪ್ರಶ್ನೆಗೆ ನೋಟೀಸ್ ಕೊಟ್ಟಿದ್ದೇ ತಾವು ತಿಳಿದು ಹೇಳಬೇಕೆಂದಲ್ಲವೇ ? ಅವರುಗಳು ಅಲ್ಲಿ ಎಷ್ಟು ವರ್ಷಗಳಿಂದ ವಾಸ ಮಾಡುತ್ತಿದ್ದಾರೆಂಬುದನ್ನಾದರೂ ಹೇಳುತ್ತೀರಾ ?

ಶ್ರೀ ಟಿ. ಚನ್ನಯ್ಯ.—20 ವರ್ಷಗಳೆಂದು ಉತ್ತರದಲ್ಲೇ ಹೇಳಿದೆ.